## ನಕ್ಕುಬಿಡಿ

ಬೇಸಿಗೆಯಲ್ಲಿ ನವ ವಿವಾಹಿತ ಗೋಪಿ ಕಂಡುಕೊಂಡ ಸತ್ಯಾಂಶ...
'ಬೇಸಿಗೆಕಾಲ ಮತ್ತು ಹೆಂಡತಿ ಒಂದೇ ರೀತಿ. ಬಿಸಿಲು ಮತ್ತು ಹೆಂಡತಿಯ ತೀವ್ರತೆ ಹೆಚ್ಚಿದಷ್ಟೂ ಎಂಥವರ ಬೆವರೂ ಇಳಿದುಬಿಡುತ್ತದೆ.

***

**ಪತ್ನಿ:** ನಾನು ನಿಮ್ಮ ನೀಲಿ ಶರ್ಟಿಗೆ ಇಸ್ತ್ರಿ ಹಾಕುತ್ತಿದ್ದಾಗ ಅದರ ಕಾಲರ್ ತುದಿ ಸ್ವಲ್ಪ ಸುಟ್ಟು ಹೋಯಿತು. ಸಾರಿ.
**ಪತಿ:** ಪರವಾಗಿಲ್ಲ ಕಣೆ, ನನ್ನ ಬಳಿ ಅಂಥಾದ್ದೇ ಇನ್ನೊಂದು ನೀಲಿ ಶರ್ಟ್ ಇದೆ. ಅದನ್ನು ಕೊಡು.
**ಪತ್ನಿ:** ನಂಗೊತ್ತಿತ್ತು ಕಣ್ರೀ, ಅದಕ್ಕೆ, ಆ ಶರ್ಟಿನ ಕಾಲರ್ ತುದಿ ಕತ್ತರಿಸಿ ನಾನು ಸುಟ್ಟಿರುವ ಶರ್ಟಿನ ಕಾಲರ್ ತುದಿ ಹೊಲಿದುಬಿಟ್ಟೆ.

***

**ಪತಿ:** ಎಲ್ಲಿದ್ದೀಯಾ?
**ಪತ್ನಿ:** ನಾನು ಮನೆಯ ವರಾಂಡಾ ಮತ್ತು ಅಡುಗೆ ಮನೆಯ ಮಧ್ಯದಲ್ಲಿನ ಹಾಲ್ ಬಳಿಯ ಬಾಗಿಲಿನ ಪಕ್ಕದಲ್ಲಿ ಇದ್ದೀನಿ.
**ಪತಿ:** ತಲೆಕೆಟ್ಟಿದೆಯಾ? ಮನೆಯಲ್ಲಿದ್ದೀನಿ ಅಂತ ಹೇಳೋಕ್ಕೆ ರೋಗನಾ?
**ಪತ್ನಿ:** ತಲೆಕೆಟ್ಟಿರೋದು ನನಗಾ ನಿಮಗಾ. ಲ್ಯಾಂಡ್‌ಲೈನ್ ನಂಬರ್‌ಗೆ ಫೋನ್ ಮಾಡಿ ಎಲ್ಲಿದ್ದೀಯಾ ಅಂತ ಕೇಳ್ತಿದ್ದೀರಲ್ಲ.

***

ಚಳಿಗಾಲದ ಮುಂಜಾನೆಯಂದು ಗುಂಡ, ಚಳಿಯ ಬಗ್ಗೆ ಬೇಸರ ಮಾಡಿಕೊಂಡು ಥರ ಥರ ನಡುಗುತ್ತಾ ಹೀಗೆ ಗೊಣಗಿದ...
ಎಲೈ ಉಷ್ಣಾಂಶವೇ, ಅದೆಷ್ಟು ಕೆಳಮಟ್ಟಕ್ಕಿಳಿದಿರುವೆ? ಥೂ ನಾಚಿಕೆಗೇಡು.

***

**ಪತ್ನಿ:** (ಪತಿಯ ಜನ್ಮದಿನದಂದು) ನಿಮಗೆ ಏನು ಉಡುಗೊರೆ ನೀಡಲಿ?
**ಪತಿ:** ಉಡುಗೊರೆ ಏನೂ ಬೇಡ. ಪತಿಯೆಂಬ ಮರ್ಯಾದೆ ಕೊಟ್ಟು, ಚೆನ್ನಾಗಿ ಮಾತಾಡಿದರೆ ಸಾಕು.
**ಪತ್ನಿ:** (ಕೊಂಚ ಸಮಯ ಯೋಚಿಸಿದ ಬಳಿಕ) ಇಲ್ಲರೀ... ನಾನು ಉಡುಗೊರೆಯನ್ನೇ ನೀಡುತ್ತೇನೆ.

***

ಅತ್ಯಂತ ದುಃಖದಾಯಕ ಬ್ರೇಕ್‌ಅಪ್ ಚೀನಾದಲ್ಲಿ ಉಂಟಾಗುತ್ತದೆ. ಏಕೆಂದರೆ ಎಲ್ಲಿ ಹೋದರೂ ಅಲ್ಲಿ ಮತ್ತೆ ಅದೇ ಮುಖ ಕಾಣಿಸಿಕೊಳ್ಳುತ್ತದೆ.

***

**ಪತಿ:** ನನ್ನ ಶರ್ಟಿನ ಜೇಬಿನಿಂದ ಹಣ ತೆಗೆದುಕೊಂಡ್ಯಾ?
**ಪತ್ನಿ:** ಹೌದು, ಅವಶ್ಯಕತೆಯಿತ್ತು.
**ಪತಿ:** ಅವಶ್ಯಕತೆ ಇದ್ರೆ ಕೇಳಿ ತೆಗೆದುಕೊಳ್ಳಬೇಕು. ಕೇಳದೆ ತೆಗೆಯುವ ಅವಶ್ಯಕತೆಯೇನಿತ್ತು?
**ಪತ್ನಿ:** ಎಲ್ಲಿಯ ತನಕ ಕೇಳುತ್ತಿರೋದು? ಈಗ ನಾನು ಆತ್ಮನಿರ್ಭರಳಾಗುತ್ತಿದ್ದೇನೆ.

***

**ರಾಮು:** ಮದುವೆಗೆ ಹೋಗಲಿಕ್ಕಿದೆ. ಎಲ್ಲರೂ ನನ್ನನ್ನು ಗಮನಿಸುವಂತೆ ಯಾವ ಕೋಟ್ ಧರಿಸಲಿ?
**ಗೋಪಿ:** ಪೆಟಿಕೋಟ್ ಧರಿಸಿ ಹೋಗು. ಖಂಡಿತವಾಗಿಯೂ ಎಲ್ಲರೂ ನಿನ್ನನ್ನೇ ನೋಡುತ್ತಾರೆ.

***

**ಮೇಷ್ಟ್ರು:** ಈ ವರ್ಷ ಎಲ್ಲಾ ವಿದ್ಯಾರ್ಥಿಗಳು ಪಾಸ್ ಆಗಬೇಕು. ಯಾಕಂದ್ರೆ... ಅಷ್ಟರಲ್ಲಿ ಓರ್ವ ವಿದ್ಯಾರ್ಥಿ ಎದ್ದು ನಿಂತು ಹೇಳಿದ.
**ವಿದ್ಯಾರ್ಥಿ:** ಯಾಕಂದ್ರೆ ಫೇಲ್ ಆದ್ರೆ ಮತ್ತೊಮ್ಮೆ ಈ ಮೇಷ್ಟ್ರ ಪಾಠನೇ ಕೇಳಬೇಕಾಗುತ್ತೆ ಅದಕ್ಕೆ.

***

**ಗಂಡ:** ತಿನ್ನೋದಕ್ಕೆ ಬದುಕಬಾರದು, ಬದುಕೋಕೆ ತಿನ್ನಬೇಕು, ತಿಂದು ತಿಂದು ಎಷ್ಟು ದಪ್ಪ ಆಗಿದ್ದೀಯಾ?
**ಹೆಂಡತಿ:** ದಪ್ಪ ಅಂತ ಯಾಕೆ ಅನ್ಕೋತಿರಾ ತುಂಬಿದ ಕೊಡ ಅಂತ ಅನ್ಕೊಳ್ಳಿ.

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್, ಮುಂಬೈ


